ಕರ್ನಾಟಕ ವಿಧಾನ ಸಭೆ

ಶುಕ್ರವಾರ 13ನೇ ಜುಲೈ 1990

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು

ಮಾನ್ಯ ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಇವೊತ್ತು ದಯವಿಟ್ಟು ಪರಿಸ್ಥಿತಿ ಏನು ಆಗಿದೆ ಎಂದರೆ...

MR. SPEAKER.—Order, order

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ. ಪರಿಸ್ಥಿತಿ ಏನು ಆಗಿದೆ ಎಂದರೆ ನಾವು ತಮ್ಮ ಮುಂದೆ ಹೇಳದೇ ಬೇರೆ ಯಾವುದೇ ವಿಧಿ ಇಲ್ಲ...

MR. SPEAKER.—I call the House to order.

ಶ್ರೀ ಟಿ. ಎಂ. ಮಂಜುನಾಥ್.—ಇನ್ನು ಮೂರು ದಿವಸಕ್ಕೆ ಸದನ ಮುಗಿಯುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಷಯ ..

ಶ್ರೀ ಎಲ್. ಆರ್. ಶಿವರಾಮೇಗೌಡ. - ದಯಮಾಡಿ ಅವಕಾಶ ಮಾಡಿಕೊಡಿ. ರೈತರ ಪರಿಸ್ಥಿತಿಯನ್ನು...

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಇದು ರೈತರ ಆಗುಹೋಗುಗಳ ವಿಚಾರ...

ಶ್ರೀ ಎಲ್. ಆರ್. ಶಿವರಾಮೇಗೌಡ.—ದಯಮಾಡಿ ಅವಕಾಶ ಮಾಡಿಕೊಡಬೇಕು. ಕೊಬ್ಬರಿ ಬೆಲೆ ವಿಚಾರದಲ್ಲಿ ಒಂದು ನಿಗದಿಯಾದ ರೇಟ್ ಫಿಕ್ಸ್ ಮಾಡುವ ವಿಚಾರ...

ಅಧ್ಯಕ್ಷರು. ಸಭೆ ಇನ್ನೂ ಪ್ರಾರಂಭ ಆಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಆದೇಶ ಕೊಡಿ, ಅವಕಾಶ ಮಾಡಿಕೊಡಿ ನಾವು ಸುಳಿತುಕೊಳ್ಳುತ್ತೇವೆ.

ಅಧ್ಯಕ್ಷರು.—ಸಭೆ ಇನ್ನೂ ಪ್ರಾರಂಭ ಆಗಿಲ್ಲ. ಸಭೆ ಪ್ರಾರಂಭ ಆಗದೇ ಇರುವುದರಿಂದ ಅಧ್ಯಕ್ಷರ ಕಿವಿಗೆ ನಿಮ್ಮ ಮಾತು ತಲುಪುವುದಿಲ್ಲ. ಕಡತಕ್ಕೂ ಹೋಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಡತಕ್ಕೆ ಹೋಗತಕ್ಕದ್ದು ಅಥವಾ ಬಿಡತಕ್ಕದ್ದು ಬೇರೆ ಪ್ರಶ್ನೆ. ಅವರು ನಮ್ಮನ್ನು ಈ ಮನೆಗೆ ಆರಿಸಿ ಕಳಿಸಿದ್ದಾರೆ. ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ನಮ್ಮ ಧರ್ಮ. ನಾವು ತಮ್ಮ ಹತ್ತಿರ ಹೇಳದೇ ಬೇರೆ ಯಾರ ಹತ್ತಿರ ಹೇಳಬೇಕು ? ದಯಮಾಡಿ ಅವಕಾಶ ಕೊಡಿ.

ಶ್ರೀ ಟಿ. ಎಂ. ಮಂಜುನಾಥ್.—ತಾವು ಅವಕಾಶ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ತಾವು ದಯವಿಟ್ಟು ಅವಕಾಶ ಕೊಡಬೇಕು. ಇದು ರೈತರ ಅಗುಹೋಗುಗಳ ಪ್ರಶ್ನೆ, ಅವರ ಜೀವನ್ಮರಣದ ಪ್ರಶ್ನೆ. ಕರ್ನಾಟಕದ ರೈತರ ಪರವಾಗಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಇದು ಅತಿ ಪ್ರಾಮುಖ್ಯವಾಗಿರತಕ್ಕಂಥಾದ್ದು. ಸದನ ನಡೆಯುವಂಥಾದ್ದು ಇನ್ನು ಮೂರು ದಿವಸ ಇದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ರೈತರ ಬಗ್ಗೆ ಮಾತನಾಡುವುದಕ್ಕೆ ಇವತ್ತಿನ ದಿವಸ ನಮಗೆ ಅವಕಾಶ ಕೊಡಲೇಬೇಕು. ನಮ್ಮ ಕಷ್ಟಗಳು ತುಂಬ ಇವೆ.

ವರದಿಯನ್ನೊಪ್ಪಿಸುವುದು

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು) — ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಸಭೆ ಒಪ್ಪಬೇಕೆಂದು ಸೂಚಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ದಯವಿಟ್ಟು ನಮಗೆ ಆಶ್ವಾಸನೆ ಕೊಡಬೇಕು, ಇಲ್ಲ ಅಂದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ದಯಮಾಡಿ ನಮಗೆ ಅವಕಾಶ ಕೊಡಬೇಕು. ನಮ್ಮ ಕಳಕಳಿಯನ್ನು ನಿಮ್ಮ ಮುಂದೆ ಇಡುತ್ತಾ ಇದ್ದೇವೆ. ನೀವು ನಮಗೆ ಅವಕಾಶ ಕೊಡಬೇಕು.

ಶ್ರೀ ಟಿ. ಎಂ. ಮಂಜುನಾಥ್.—ಸರ್ಕಾರ ಇದರ ಬಗ್ಗೆ ಇಮವರೆಗೆ ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ. ದಯಮಾಡಿ ಅವಕಾಶ ಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ರೈತರ ಕಷ್ಟ ತಮಗೆ ಅರ್ಥವಾಗಿದೆ, ನಾವು ಮತ್ತೆ ಹೇಳಬೇಕಾದ್ದಿಲ್ಲ. ರೈತರಿಗೆ ಏನು ಅನ್ಯಾಯವಾಗಿದೆ ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಟಿ. ಎಂ. ಮಂಜುನಾಥ್,—ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಅಡ್ಡಿ ಮಾಡಬೇಕು ಎಂದು ಇಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಅತಿ ಪ್ರಮುಖವಾಗಿರತಕ್ಕಂಥಾದ್ದು. ರೈತರ ಹಿತವನ್ನು ಕಾಪಾಡತಕ್ಕಂಥಾದ್ದು. ತಾವು ಅಪ್ಪಣೆ ಕೊಡಬೇಕಾಗಿದೆ. ನಾವು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇವೆ. ತಾವು ದೊಡ್ಡ ಮನಸ್ಸು ಮಾಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ರಾಜ್ಯದಲ್ಲಿ ಇದಕ್ಕಿಂತ ಪ್ರಾಮುಖ್ಯವಾದ ವಿಚಾರ ಚರ್ಚೆ ನಡಾಯುವಂಥಾದ್ದು ಇನ್ಯಾವುದಿದೆ ಹೇಳಿ. ೫-೬ ಜಿಲ್ಲೆಗಳಲ್ಲಿ ರೈತರು ಹಾಳಾಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ.

ಶ್ರೀ ಟಿ. ಎಂ. ಮಂಜುನಾಥ್.—ಇದು ರೈತ ಕುಟುಂಬದ ಪ್ರಶ್ನೆ ವಿಚಾರ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು. ಸರ್ಕಾರ ಕೊಬರಿ ಧಾರಣೆ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನದು ಒಂದು ಮನವಿ. ಇದು ಸುಮಾರು ೪-೫ ಜಿಲ್ಲೆಗಳಲ್ಲಿರುವ ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ತಮ್ಮ ಮುಖಾಂತರ ನಾನು ಮಾನ್ಯ ಕೃಷಿ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ತಮ್ಮ ಕಲಾಪ ಏನಿದೆ ಅದರಲ್ಲಿ ಸ್ವಲ್ಪ ಕಾಲಾವಕಾಶ ಮಾಡಿಕೊಟ್ಟು ತೆಂಗು ಮತ್ತೆ ಕೊಬರಿ ಧಾರಣೆ ಬಗ್ಗೆ ಚರ್ಚೆ ಮಾಡಿ ನಾವು ಒಂದು ತೀರ್ಮಾನಕ್ಕೆ ಬರಲೇಬೇಕಾಗುತ್ತದೆ. ಆದಕಾರಣ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಉತ್ತರ ಕರ್ನಾಟಕದ ೪-೫ ಜಿಲ್ಲೆಗಳಲ್ಲಿ ಜೋಳದ ಧಾರಣೆ ಬಹಳ ಕಡಿಮೆ ಇರುವುದರಿಂದ ರೈತರು ಕಂಗಾಲಾಗಿದ್ದಾರೆ. ದಯವಿಟ್ಟು ಇವರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಗಮನ ಕೊಡಬೇಕು ಎಂದು ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ.